**ಸಿ.ಸಿ.ನಂ. 328/2026**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ ಬೇಲೂರು.**

**ಸಿ.ಸಿ.ನಂ. 328/2026**

ಪಿರ್ಯಾದಿದಾರರು:: ರಾಜ್ಯ ಸರ್ಕಾರದ ಪರವಾಗಿ
ಹಳೇಬೀಡು ಪೋಲಿಸ್ ಠಾಣೆ

::ವಿರುದ್ಧ::

ಆರೋಪಿ :: ಶ್ರೀ ಸಚಿನ್ ಬಿನ್ ರವಿಬೋವಿ,
25 ವರ್ಷ, ಕೆಎ 13 ಡಿ 2193 ಟಾಟಾ ಮಿನಿ ಗೂಡ್ಸ್ ವಾಹನದ ಚಾಲಕ,
ವಾಸ:- ಅಲ್ಲನ ಕಾಫಿ ಕ್ಯೂರಿಂಗ್ ಹತ್ತಿರ, ಹಾಸನ.

## ಆರೋಪಣೆ

ದಿನಾಂಕ 18.01.2026 ರಂದು ಬೆಳಗ್ಗೆ 10.15 ಗಂಟೆ ಸಮಯದಲ್ಲಿ ಹಳೇಬೀಡು ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಹಗರೆ ಗ್ರಾಮದ ಕೆಇಬಿ ಹತ್ತಿರ ಹಾಸನ ಬೇಲೂರು ರಸ್ತೆಯಲ್ಲಿ ಚಾಸಾ-1 ರವರು ಕೆಎ 45 ಎಫ್ 0013 ರ ಕೆಎಸ್ ಆರ್ ಟಿ ಸಿ ಬಸ್ಸನ್ನು ಚಾಲನೆ ಮಾಡಿಕೊಂಡು ಹಾಸನದ ಕಡೆಯಿಂದ ಬೇಲೂರು ಕಡೆಗೆ ಹೋಗುತ್ತಿದ್ದಾಗ, ಆರೋಪಿಯಾದ ನೀವು ಕೆಎ 13 ಡಿ 2193 ನಂಬರಿನ ಟಾಟಾ ಮಿನಿ ಗೂಡ್ಸ್ ವಾಹನವನ್ನು ಬೇಲೂರು ಕಡೆಯಿಂದ ಹಕರೆಗೆ ಕಡೆಗೆ ಸದರಿ ಬಸ್ಸನ್ನು ಸಾರ್ವಜನಿಕ ರಸ್ತೆಯಲ್ಲಿ ಮಾನವನ ಪ್ರಾಣಕ್ಕೆ ಹಾನಿ ಉಂಟು ಮಾಡುವ ರೀತಿಯಲ್ಲಿ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಚಾಸಾ-1 ರವರು ಚಾಲನೆ ಮಾಡುತ್ತಿದ್ದ ಬಸ್ಸಿಗೆ ಡಿಕ್ಕಿ ಮಾಡಿ ಅಪಘಾತಪಡಿಸಿರುತ್ತೀರಿ, ಆದ್ದರಿಂದ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತ ಕಲಂ 281 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ಆರೋಪಿಸಲಾಗಿದೆ.

ಮೇಲೆ ಹೇಳಿದಂತಹ ಆಪಾದನೆಗಳು ಈ ನ್ಯಾಯಾಲಯದಿಂದ ವಿಚಾರಣೆ ಆಗ ತಕ್ಕದ್ದು ಅಂಥ ಈ ಮೂಲಕ ಆದೇಶ ಮಾಡಿರುತ್ತೇನೆ.

ಪ್ರಶ್ನೆ:- ಈಗ ಓದಿ ಹೇಳಿದ ಆಪಾದನೆಗಳನ್ನು ಅರ್ಥ ಮಾಡಿಕೊಂಡಿರುತ್ತೀರಾ?
ಉತ್ತರ:-

ಪ್ರಶ್ನೆ:- ಮೇಲೆ ಹೇಳಿದ ಆಪಾದನೆಗಳನ್ನು ಒಪ್ಪಿಕೊಳ್ಳುವಿರಾ? ಅಥವಾ ವಿಚಾರಣೆ ಆಗಬೇಕೆನ್ನುವಿರಾ?
ಉತ್ತರ:-

(ಮೇಲ್ಕಂಡ ಆಪಾದನೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ, ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಅವು ಸರಿಯಾಗಿರುತ್ತದೆ ಎಂದು ಈ ಮೂಲಕ ದೃಡೀಕರಿಸುತ್ತೇನೆ.)

ದಿನಾಂಕ: 08.06.2026
ಸ್ಥಳ: ಬೇಲೂರು.

(ಶ್ರೀ.ನಾಗೇಂದ್ರ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ
ಬೇಲೂರು.